# ಸಾಮೂಹಿಕ ಕಲ್ಯಾಣ ಮಹೋತ್ಸವ

**ಚಿತ್ರದುರ್ಗ, ಮೇ. 05** - ಕೊರೊನಾ ಕಾಯಿಲೆಯ ಸಂಕಟ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಶ್ರೀಮಠದಲ್ಲಿ ಸರಳವಾಗಿ ಕಲ್ಯಾಣ ಮಹೋತ್ಸವ ನೆರವೇರಿದೆ ಎಂಬುದು ದಾಖಲೆ. ಕೊರೊನಾ ವೈರಸ್ ವ್ಯಕ್ತಿಯಿಂದ ವ್ಯಕ್ತಿಗೆ ಬರುತ್ತದೆ. ಹಾಗಾಗಿ ಅಂತರವಿರಬೇಕು. ಜೀವವೊಂದಿದ್ದರೆ ಜೀವನದಲ್ಲಿ ಅಂದುಕೊಂಡದ್ದನ್ನೆಲ್ಲ ಸಾಧಿಸಬಹುದು. ಬೇಕಾದುದ್ದನ್ನೆಲ್ಲ ಪಡೆಯಬಹುದು. ಜನರು ಜೀವದ ಬೆಲೆಯನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಜಯವಿಭವ ಸ್ವಾಮಿಗಳ ಸ್ಮರಣೋತ್ಸವ ಪ್ರಯುಕ್ತ ಶ್ರೀಗಳು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಕಲ್ಯಾಣ ಮಹೋತ್ಸವದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಜಯವಿಭವ ಸ್ವಾಮಿಗಳಿಗೆ ಪ್ರಾಣಿಪಕ್ಷಿಗಳ ಮೇಲೆ ಅತ್ಯಂತ ಪ್ರೀತಿ. ಜಮೀನಿನ ಮೇಲೂ ಪ್ರೀತಿ ಇಟ್ಟುಕೊಂಡಿದ್ದರು. ಶ್ರೀಮಠ ಹಾಗು ನಿಸರ್ಗದ ಮೇಲೆ ವಿಶ್ವಾಸ ಇತ್ತು. ಜಯವಿಭವ ಸ್ವಾಮಿಗಳು ಪ್ರಖಾಂಡ ಪಂಡಿತರು ಹಾಗು ಕೃಷಿ ಪ್ರೇಮಿಗಳು. ಅವರು ಅನೇಕ ಬಾರಿ ಜಯದೇವ ಸ್ವಾಮಿಗಳ ಜೊತೆ ವೈಚಾರಿಕ ಚಿಂತನೆ ಮಾಡುತ್ತಿದ್ದರು ಎಂದು ಸ್ಮರಿಸಿದರು.

ವೇದಿಕೆಯಲ್ಲಿ ಬಸವೇಶ್ವರ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಡೀನ್ ಡಾ|| ಪ್ರಶಾಂತ್, ವೀರಶೈವ ಸಮಾಜದ ಕಾರ್ಯದರ್ಶಿ ಪಟೇಲ್ ಶಿವಕುಮಾರ್ ಇದ್ದರು. ಈ ಸಂದರ್ಭದಲ್ಲಿ 4 ಜೋಡಿಗಳು ದಾಂಪತ್ಯ ಜೀವನಕ್ಕೆ ಅಡಿಯಿಟ್ಟರು.

ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಲಿಂಗರಾಜು, ಆರ್.ಲಿಂಗರಾಜು ಮೊದಲಾದವರಿದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ಬಸವರಾಜಶಾಸ್ತ್ರಿ ನಿರೂಪಿಸಿದರು.




ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ.)
ಚಿತ್ರದುರ್ಗ - ಇವರ ಸಹಯೋಗದಲ್ಲಿ
ಮೂವತ್ತನೇ
ಐದನೇ ತಿಂಗಳ
ಸಾಮೂಹಿಕ
ಮಹೋತ್ಸವ
ದಿನಾಂಕ : 05-05-2020 ಮಂಗಳವಾರ
ಅನುಭವ ಮಂಟಪ




ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ.
ಚಿತ್ರದುರ್ಗ - ಇವರ ಸಹಯೋಗದಲ್ಲಿ
ಮೂವತ್ತನೇ ವರ್ಷ ಐದನೇ ತಿಂಗಳ
ಕಲ್ಯಾಣ


ಮೂವತ್ತನೇ ವರ್ಷ ಐದನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ


ಮೂವತ್ತನೇ ವರ್ಷ ಐದನೇ ತಿಂಗಳ